ಬೆಳಗಾಗುವುದರೊಳಗೆ ಎದ್ದು ಹಾಸ್ಟೆಲಿನಲ್ಲಿ ತಿಂಡಿಯನ್ನೂ ತಿನ್ನದೇ ಹತ್ತಿರದ ರೋಡಿನಲ್ಲೇ ಇರುವ ಚಿಕ್ಕಮ್ಮನ ಮನೆಗೆ ನಡೆದುಬಿಟ್ಟಿದ್ದ. ನಾಳೆ ಸುದ್ದಿ ಕಾಲೇಜಿಗೆಲ್ಲಾ ಗೊತ್ತಾಗಿ ಇನ್ನೇನಾಗಬೇಕೊ ಎಂದುಕೊಂಡ. ಮುಖ್ಯವಾಗಿ ಬಶೀರನ ಹತ್ತಿರದ ಚೇಲಾಗಳು ಆತನ ಹತ್ತಿರ ಸುಳಿಯುವ ಧೈರ್ಯ ಮಾಡಲಿಲ್ಲ. ಅವರು ಹಾಸ್ಟೆಲಿನಲ್ಲೇ ಇರಲಿಲ್ಲ. ಬಶೀರನೂ ಅವರನ್ನು ಹುಡುಕಿದ, ಸಿಗಲಿಲ್ಲ. ಏನಿದ್ದರೂ ಸೋಮವಾರ ಬೆಳಿಗ್ಗೆ ಕಾಲೇಜಿಗೆ ಹೋಗಬೇಕಲ್ಲ ಅದಕ್ಕೆ ಭಾನುವಾರ ರಾತ್ರಿಯೊಳಗೆ ಹಾಸ್ಟೆಲ್ ಸೇರಲೇಬೇಕಲ್ಲ ಆಗ ಅವರಿಗೆ ಸಿಕ್ಕಿದರಾಯಿತು ಎಂದುಕೊಂಡ.

ಭಾನುವಾರದ ರಾತ್ರಿಯ ಊಟದ ತಯಾರಿ ಮೆಸ್ಸಿನಲ್ಲಿ ನಡೆದಿತ್ತು. ಮಾವನ ಮನೆ, ಚಿಕ್ಕಮ್ಮನ ಮನೆ, ಹೊಸ ಸಿನಿಮಾಗಳಿಗೆಲ್ಲ ಹೋದವರೆಲ್ಲ ಒಬ್ಬೊಬ್ಬರೇ ಮರಳುತ್ತಿದ್ದರು. ಊಟ ಪ್ರಾರಂಭವಾಗುವುದಕ್ಕೆ ಮುನ್ನ, ಒಬ್ಬೊಬ್ಬರು ತಮ್ಮ ತಮ್ಮ ಪ್ಲೇಟನ್ನು ಹಿಡಿದು ಒಳಗೆ ಬರುತ್ತಿದ್ದರು. 'ಸ್ವಲ್ಪ ತಡೆದುಕೊಳ್ಳರಯ್ಯಾ, ಆದಕೂಡಲೇ ಕರೆಯುತ್ತೇನೆ. ಎಲ್ಲರೂ ಒಲೆ ಮುಂದೆ ಹಾಗೆ ನಿಂತುಕೊಂಡು ನಮಗೆ ತೊಂದರೆ ಕೊಡಬೇಡಿ. ಎಲ್ಲ ಹೋಗಿ ಕುಳಿತುಕೊಳ್ಳಿ' ಎಂದು ಅಡುಗೆ ಭಟ್ಟರು ಕೈಯಲ್ಲಿದ್ದ ಸೌಟನ್ನು ಬಾಂಡಲೆಗೆ ಬಡಿದು ಬಡಿದು ಹೇಳುತ್ತಿದ್ದರು.

ಒಲೆಯ ಸುತ್ತ ನಿಂತಿದ್ದ ಈಗಷ್ಟೇ ಕಾಲೇಜಿಗೆ ಸೇರಿದ ಹುಡುಗರೆಲ್ಲ ಹಿಂದಕ್ಕೆ ಸರಿದು ಊಟ ಮಾಡುವ ಜಾಗದಲ್ಲಿ ತಲೆಗೆ ಜೋರಾಗಿ ಎಣ್ಣೆ ಸವರಿಕೊಂಡು ಊಟ ಮಾಡಿಕೊಂಡೇ ಸ್ನಾನ ಮಾಡಿದರಾಯಿತು ಎಂದು ಶಾಂತಿಯಿಂದ ಕುಳಿತ ಬಶೀರನ ಸುತ್ತ ಬಂದು ನಿಂತುಕೊಂಡರು. 'ನಿಮಗೆ ಭಟ್ಟರು ಎಷ್ಟು ಸಾರಿ ಹೇಳಿಲ್ಲ ಒಲೆಯ ಮುಂದೆ ನಿಂತುಕೊಳ್ಳಬೇಡಿ. ಊಟ ತಯಾರಾದ ಮೇಲೆ ತಂದಿಡುತ್ತೇನೆ, ಸಾಲಿನಲ್ಲಿ ಊಟ ಬಡಿಸಿಕೊಳ್ಳಬೇಕು ಎಂದು. ನಿಮಗೆ ಯಾವಾಗ ಬುದ್ಧಿ ಬರಬೇಕೊ' ಎಂದಿದ್ದಕ್ಕೆ ಹೊಸದಾಗಿ ಸೇರಿ ಆರೆಂಟು ತಿಂಗಳಾಗಿದ್ದವನೊಬ್ಬ ಬಶೀರನ ರೀತಿಯಲ್ಲೇ ಕಿಕ್ ಕಿಕ್ ಕಿಕ್ ಎಂದು ನಕ್ಕ. ಉಳಿದವರಿಗೆ ಒಂದೇ ಸಮನೇ ಯಾರು ನಕ್ಕಿದ್ದು ಎಂದು ತಿಳಿಯಲಿಲ್ಲ.

ಆಗಲೇ ಬಶೀರನಿಗೆ ಸಿಟ್ಟು ಬಂದು ಸುತ್ತಲಿರುವವರನ್ನು ಉದ್ದೇಶಿಸಿ ಎಂದಿನಂತೆ ಎರಡು ಮಾತನಾಡಿದ: 'ಒಂದು ಚೆಂಡು ಕೊಚ್ಚೆಯಲ್ಲಿ ಬಿದ್ದಿದೆ ಅಂದುಕೊ, ಅದರ ಮೇಲೆ ಎಷ್ಟೇ ಟ್ಯಾಂಕರ್ ನೀರು ತಂದು ಸುರಿದರೂ ಚೆಂಡು ಸ್ವಚ್ಛವಾಗತ್ತಾ... ಎಲ್ಲ ನೀರೂ ಕೊಚ್ಚೆಗೆ ಸೇರಿ ಕೊಚ್ಚೆ ನೀರೇ ಆಗುತ್ತದೆ. ಅದರಲ್ಲಿದ್ದ ಚೆಂಡು ಕೊಚ್ಚೆಯಲ್ಲೇ ಸುರುಳಿ ಸುರುಳಿ ತಿರುಗುತ್ತಾ ಹೊಲಸಾಗೇ ಉಳಿಯುತ್ತದೆ. ಆದರೆ ಆ ಚೆಂಡನ್ನು ಕೊಚ್ಚೆಯಿಂದ ಹೊರಗೆ ತೆಗೆದು ಅರ್ಧ ಬಿಂದಿಗೆ ನೀರು ಹಾಕು, ಹೇಗೆ ಸ್ವಚ್ಛವಾಗುತ್ತದೆ' ಎಂದ. ಎಂದಿನಂತೆಯೇ ಇಂದೂ ಬಶೀರನ ಮುಖದಲ್ಲಿ ಅದೇ ಹೊಳಪಿತ್ತು. ಮಾತು ಮಾತಿಗೆ ಕೈ ಮಾಡುವುದು, ಹಾವ ಭಾವ ಎಲ್ಲರೂ ನೋಡುವ ಹಾಗಿತ್ತು. ಮೊನ್ನೆಯಷ್ಟೇ ಎರಡು ಕೈಯಲ್ಲಿ ಕಬ್ಬಿಣದ ತುಂಡನ್ನು ಹೊತ್ತು ಮುಖ್ಯ ದ್ವಾರದಲ್ಲಿ ಹನುಮಂತನಂತೆ ನಿಂತಿದ್ದನ್ನು ನೋಡಿದ ಕೆಲವು ಹೊಸಬರೂ ಈತನ ಮಾತನ್ನು ಕೇಳುತ್ತಿದ್ದರು. ಕಳ್ಳ ಎಷ್ಟು ಬೇಗ ಪ್ಲೇಟ್ ಚೇಂಜ್ ಮಾಡತಾನೆ ನೋಡು ಎಂದುಕೊಳ್ಳುತ್ತಿದ್ದರು. ಆದರೆ ಬಶೀರನಿಗೆ ಮಾತ್ರ ಏನೂ ಫರಕ್ ಇರಲಿಲ್ಲ. ಆತ ತಾನು ಹೇಳುವುದನ್ನು ನಿಜವಾಗಲೂ ಮನಸ್ಸಿನ ಒಳಗಡೆಯಿಂದ ಹೇಳುತ್ತಿದ್ದ. ಅವನಿಂದ ಸ್ವಲ್ಪ ದೂರ ಕುಂತ, ಬಶೀರನಿಗಿಂತಲೂ ಸೀನಿಯರ್‌ಗಳು 'ನೋಡು ನಮ್ಮ ಪ್ರವಾದಿನಾ ಬಂದ ಹೊಸ ಹುಡುಗರಿಗೆ ಹೇಗ ಹತ್ತಿಸುತ್ತಿದ್ದಾನೆ, ಹೀಗೆ ಬಿಟ್ಟರೆ ಎಲ್ಲರೂ ನಾಳೆಗೇ ಹಿಮಾಲಯಕ್ಕೆ ಟಿಕೆಟ್ ತೆಗೆಸುತ್ತಾರೆ... ಕೊಚ್ಚೆ ನೀರಂತೆ, ಟ್ಯಾಂಕರ್ ನೀರಂತೆ... ಹಲಕಾ ನನ್ ಮಗಾ' ಎನ್ನುತ್ತಿದ್ದರು.

ಅಷ್ಟು ಹೊತ್ತಿಗೆ ನಿನ್ನೆಯಿಂದ ಕಣ್ಣು ತಪ್ಪಿಸಿಕೊಂಡಿದ್ದ ಬಶೀರನ ಎರಡು ಚೇಲಾಗಳು ಊಟಕ್ಕೆ ತಾಟನ್ನು ಹಿಡಿದುಕೊಂಡು ಮೆಸ್ಸಿನೊಳಗೆ ಸಾವಕಾಶವಾಗಿ ಬರುತ್ತಿದ್ದುದನ್ನು ಬಶೀರ ಕಂಡಿದ್ದೇ ತನ್ನ